ತಲೆಯಾಡಿಸಿದೆ. ಅವನು ಉತ್ಸುಕತೆಯಿಂದ ನನ್ನ ಪಾರ್ಲರನ್ನು ಗಮನಿಸಿದ. ನಾನೂ ಸಹ ಅವನು ಪಾರ್ಲರ್ ನೋಡಲು ಅವಕಾಶ ಕೊಟ್ಟೆ. ಗಿರಾಕಿಗಳು ನಿರಾಳರಾಗುವುದು ಅಗತ್ಯ.

ಅವನು ಪಾರ್ಲರ್ ಚೌಕಟ್ಟಿನ ಸಮೀಪದಲ್ಲಿದ್ದ ಪಿರಾಮಿಡ್ ಅನ್ನು ಆಶ್ಚರ್ಯದಿಂದ ನೋಡಿದ. ಅಲ್ಲಲ್ಲಿ ಹಾಕಿದ್ದ ಅಲೋವೆರಾ ಗಿಡಗಳನ್ನು ಸ್ಪರ್ಶಿಸಿದ, ನೇವರಿಸಿ ಮೂಸಿದ; ಅವು ನಿಜವಾದ ಗಿಡಗಳೋ ಅಥವಾ ನಕಲಿ ಗಿಡಗಳೋ ಎಂಬುದನ್ನು ತಿಳಿಯಲು ಹಾಗೆ ಮಾಡಿದ. ಅವನ ದೃಷ್ಟಿ ಗೋಡೆಗೆ ಹಾಕಿದ್ದ ನನ್ನ ಗುರು – ಮೌರೀನ್ ಟಾಡ್ ಚಿತ್ರದ ಮೇಲೆ ಬಿತ್ತು, ನಂತರ ನನ್ನನ್ನು ನೋಡಿದ. ಅವನ ಕಣ್ಣುಗಳಲ್ಲಿ ಕುತೂಹಲ ಮೂಡಿತು. ಈ ಚಿತ್ರವನ್ನು ನೋಡಿದ ಎಲ್ಲರಿಗೂ ಮೂಡುವಂಥ ಪ್ರಶ್ನೆ ಬಹುಶಃ ಅವನಿಗೂ ಮೂಡಿತು. ನಾನು ಇಂಡಿಯನ್, ನನ್ನ ಗುರು ಮೌರೀನ್ ಟಾಡ್ ಆಫ್ರಿಕನ್ ಹಬ್ಶಿ... ನಮ್ಮ ಭೇಟಿ ಹೇಗಾಯಿತು? ಅವಳು ಹೇಗೆ ನನ್ನ ಗುರುವಾದಳು, ನಾನು ಹೇಗೆ ಶಿಷ್ಯೆಯಾದೆ? ಸರಿ, ಅವನೇನೂ ಕೇಳಲಿಲ್ಲ, ನಾನೂ ಏನೂ ಹೇಳಲಿಲ್ಲ.

ಅವನು ಗೋಡೆಗೆ ನೇತುಹಾಕಿದ್ದ ನನ್ನ ಡಿಪ್ಲೊಮ ಸರ್ಟಿಫಿಕೇಟನ್ನು ಓದಿದ. ನನಗೆ ಹೆಮ್ಮೆಯೆನಿಸಿತು. ನಾನೊಬ್ಬಳು ಸಾಮಾನ್ಯ ಮಸಾಜ್ ಮಾಡುವವಳಲ್ಲ, ಉದ್ಯೋಗಸ್ಥ ಮಸಾಜ್ ಥೆರಪಿಸ್ಟ್!

ಗೋಡೆಗಳಿಗೆ ಹಾಕಿದ್ದ ವಾಕ್ಯಗಳನ್ನು ಓದಿ ಅವನು ಮುಗುಳ್ನಕ್ಕ –

ಆ ಜಾ... ತನ್‌ಮನ್ ಕೋ ಕರ್ ದೆ ಕೈರಾಲಿ ಮಸಾಜ್ ತರೋತಾಜಾ.

ಮಸಾಜ್ ಮಾಡಿಸಿಕೊಳ್ಳಿ, ನೋವನ್ನು ನೀಗಿಸಿಕೊಳ್ಳಿ.

ಪ್ರತಿಯೊಂದು ಕಾಯಿಲೆಗೆ ಔಷಧಿ ತೇಲ್ ಮಾಲೀಶ್.

ಅನೇಕ ಸಮಸ್ಯೆಗಳಿಗೆ ಪರಿಹಾರ ಅಕ್ಯೂಪ್ರೆಶರ್, ಮಸಾಜ್, ಹರ್ಬಲ್ ವಾಟರ್.

ಆಯುರ್ವೇದಿಕ್ ಮಸಾಜ್: ಆರೋಗ್ಯಕ್ಕೆ ಒಂದು ಪ್ರಾಕೃತಿಕ ಕೊಡುಗೆ!

ಅವನು ನನ್ನೆಡೆಗೆ ದೃಷ್ಟಿಹರಿಸಿ ಒಮ್ಮೆಲೆ ಹೇಳಿದ, 'ನನ್ನಿಡೀ ಶರೀರದಲ್ಲಿ ನೋವಿದೆ, ಅದೂ ವಿಶೇಷವಾಗಿ ಕಾಲುಗಳಲ್ಲಿ ನೋವಿದೆ. ನನಗೆ ಒಳ್ಳೆಯ ಮಸಾಜ್ ಬೇಕು...'

'ಮಸಾಜ್ ಡೇ ನಿಮ್ಮ ವಾರದ ಬೆಸ್ಟ್ ಡೇ ಆಗುತ್ತದೆ, ಕೂತುಕೊಳ್ಳಿ'. ಅವನಿಗೆ ಸೋಫಾದಲ್ಲಿ ಕೂರುವಂತೆ ಸಂಜ್ಞೆ ಮಾಡಿ ನಾನು ಒಳಗೆ ಹೋದೆ. ನಂತರ ತಾಜಾ ಹಣ್ಣುಗಳು ಮತ್ತು ತರಕಾರಿಗಳ ಸ್ಮೂಥಿ ತಂದು ಅವನೆದುರಿಗಿಟ್ಟೆ. ಅವನಿಗೆ ಗಾಬರಿಯಾಯಿತು. ಅವನು ತನ್ನ ಕೈಯನ್ನು ಒಮ್ಮೆಲೆ ಚಾಚಲಿಲ್ಲ.

'ಇದು ಕಾಂಪ್ಲಿಮೆಂಟರಿ ಆರ್ಗ್ಯಾನಿಕ್ ಡ್ರಿಂಕ್' ನಾನು ಮುಗುಳ್ನಕ್ಕೆ.

'ಓಹ್! ಐ ಸಿ! ಥ್ಯಾಂಕ್ ಯೂ!' ಅವನೂ ನಗೆ ಸೂಸಿದ.

ಅವನು ಸ್ಮೂಥಿಯನ್ನು ಮೆಲ್ಲಮೆಲ್ಲನೆ ಗುಟುಕರಿಸಿದ. ನಾನು ರಿಸೆಪ್ಷನ್ ಕೌಂಟರಿನಲ್ಲಿ, ನನ್ನ ಜಾಗದಲ್ಲಿ ಕೂತು ಅವನ ಆರೋಗ್ಯದ ಬಗ್ಗೆ ಅಂದರೆ ಚರ್ಮ ರೋಗದ ಬಗ್ಗೆ, ಹೃದಯದ ಕಾಯಿಲೆಯ ಬಗ್ಗೆ, ಅಲರ್ಜಿಯ ಬಗ್ಗೆ ವಿಚಾರಿಸಿದೆ; ನನ್ನ ಕಂಪ್ಯೂಟರ್‌ನಲ್ಲಿ ಅವನ ಕೇಸ್ ಹಿಸ್ಟ್ರಿ ದಾಖಲಿಸಿದೆ. ಕಡೆಗೆ ಒಂದು ತೀರ್ಮಾನಕ್ಕೆ ಬಂದು ಅವನ ಚಿಕಿತ್ಸೆಗೆ ಯೋಜನೆಯನ್ನು ರೂಪಿಸಿದೆ.

'ಡೀಪ್ ಟಿಶ್ಯೂಸ್ ಮಸಾಜಿನಿಂದ ಪ್ರಾರಂಭಿಸುತ್ತೇನೆ; ಒಂದು ಸೆಶನ್‌ಗೆ ಒಂದು ಗಂಟೆಯ ಮಸಾಜ್ ಆಗುವುದು'. ನಾನು ಅವನಿಗೆ ಮಸಾಜಿನ ಪ್ಯಾಕೇಜ್ ಹೇಳಿದೆ, ಡಿಸ್ಕೌಂಟ್ ಆಸೆಯನ್ನೂ ತೋರಿಸಿದೆ. ಆದರೆ ಅವನು ಪಳಗಿದ ಕ್ರೀಡಾಪಟುವಾಗಿದ್ದ, ನಾನು ತೋರಿದ ಆಸೆಗೆ ಮರುಳಾಗಲಿಲ್ಲ.

'ಇವತ್ತು ಮಸಾಜ್ ಮಾಡಿಸಿಕೊಂಡು ನೋಡ್ತೀನಿ... ನನಗೆ ನಿಮ್ಮ ಅರ್ಹತೆಯ ಬಗ್ಗೆ ಅನುಮಾನವಿಲ್ಲ, ಆದರೆ ನನಗೆ ಎಲ್ಲಾ ವಿಧದ ಮಸಾಜುಗಳು ಇಷ್ಟವಾಗಲ್ಲ. ನಾನೊಬ್ಬ ವಿಚಿತ್ರ ಮನುಷ್ಯ' ಎಂದು ಅವನು ಅಟ್ಟಹಾಸದಿಂದ ನಕ್ಕ.

'ಸರಿ' ನಿರಾಸೆಯಿಂದ ಹೇಳಿದೆ.

'ವೆರಿ ರಿಫ್ರೆಶಿಂಗ್' – ಅವನು ಖಾಲಿ ಗ್ಲಾಸನ್ನು ಟೇಬಲ್ ಮೇಲಿಟ್ಟ.

'ಯೂ ವೆಲ್‌ಕಮ್' ನಾನು ನನ್ನ ಜಾಗದಿಂದೆದ್ದು ಹೇಳಿದೆ, 'ಬನ್ನಿ...'

ನಾನು ಅವನನ್ನು ಒಳಗಿದ್ದ ಮಸಾಜ್ ಕ್ಯಾಬಿನ್‌ಗೆ ಕರೆದೊಯ್ದೆ. ನಾನು ಅವನ ಮನಸ್ಸನ್ನು ಗೆಲ್ಲಬೇಕಿದೆ. ನನ್ನ ಮಸಾಜಿನಿಂದ ಅವನನ್ನು ಖುಷಿ ಪಡಿಸಬೇಕು, ಅವನು ಪದೇ ಪದೇ ನನ್ನ ಬಳಿಗೆ ಬರುತ್ತಿರಬೇಕು. ನನಗೆ ಗಿರಾಕಿಗಳು ಬೇಕು.

'ಬಟ್ಟೆಗಳನ್ನು ಕಳಚಿ' ಅವನಿಗೆ ಸೂಚಿಸಿದೆ.

ಅವನು ನಾಚಿದ, ಮಂದ ಮುಗುಳ್ನಗೆಯೊಂದು ಅವನ ಮುಖದಲ್ಲಿ ಮೂಡಿತು. ಅವನಿಗೆ ಒಮ್ಮೆಲೆ ಬಟ್ಟೆಗಳನ್ನು ಕಳಚಲು ಸಾಧ್ಯವಾಗಲಿಲ್ಲ.

'ನನ್ನನ್ನು ಒಬ್ಬ ವೈದ್ಯೆಯೆಂದು ತಿಳಿಯಿರಿ'.

'ನಾನು ಕಾಲುಗಳಿಗೆ ಮಸಾಜ್ ಮಾಡಿಸಿಕೊಳ್ಳಬೇಕಿದೆ'.

ನಾನು ಅವನ ಅಂಗಾಲುಗಳ ಮೇಲೆ ದೃಷ್ಟಿ ಹರಿಸಿದೆ. ಅವನ ಕಾಲುಗಳಲ್ಲಿ ತೆಳು ಗುಲಾಬಿ ಬಣ್ಣದ ಪಟ್ಟಿಗಳನ್ನು ಕಟ್ಟಲಾಗಿದ್ದು, ಅಗಲದ, ತೆರೆದ ಸ್ಟ್ರೈಪ್‌ನ ಸ್ಯಾಂಡಲ್‌ಗಳಿರುವುದನ್ನು ಈ ಮೊದಲೇ ನೋಡಿದ್ದೆ.

'ಮಸಾಜ್ ಮಾಡುವಾಗ ಶರೀರದ ಎಲ್ಲಾ ಭಾಗಗಳಿಗೂ ಮಸಾಜ್ ಆಗುತ್ತದೆ. ಪ್ಯಾಂಟ್–ಶರ್ಟ್ ಕಳಚಿದರೆ ಅನುಕೂಲ. ಈ ಗೌನ್ ಧರಿಸಿ' ಎಂದು ಅವನೆಡೆಗೆ ಒಂದು ಗೌನ್ ಚಾಚಿದೆ.

ಅವನು ಅನ್ಯಮನಸ್ಕನಾಗಿ ಗೌನ್ ತೆಗೆದುಕೊಂಡ. ನಾನು ಕ್ಯಾಬಿನ್‌ನಿಂದ ಹೊರ ಹೋದೆ.

ಸ್ವಲ್ಪ ಹೊತ್ತಾದ ನಂತರ ಕ್ಯಾಬಿನ್‌ಗೆ ಬಂದಾಗ, ಅವನು ಶರ್ಟ್–ಪ್ಯಾಂಟ್ ಕಳಚಿ ಗೌನ್ ಧರಿಸಿದ್ದ. ಅಲ್ಲದೆ ಸ್ಯಾಂಡಲ್ ಕಳಚಿ ಮಸಾಜ್ ಟೇಬಲ್ ಮೇಲೆ ಕಣ್ಣುಗಳನ್ನು ಮುಚ್ಚಿಕೊಂಡು ಮಲಗಿದ್ದ. ನಾನು ಅವನ ಸಮೀಪಕ್ಕೆ ಹೋದೆ. ಅವನ ಕಾಲುಗಳಿಗೆ ಹಾಕಿದ್ದ ಪಟ್ಟಿಗಳನ್ನು ಬಿಚ್ಚಿದೆ. ಗೌನ್ ಮೇಲಕ್ಕೆ ಸರಿಸಿದೆ. ದಪ್ಪ ದಪ್ಪ, ಉಬ್ಬಿದ ಕಾಲುಗಳಲ್ಲಿ ಕೆಂಪು ಗಾಯಗಳಿದ್ದವು. ಹಿಮ್ಮಡಿಗಳು ಮತ್ತು ಅಂಗಾಲುಗಳ ಪರಿಸ್ಥಿತಿ ಸಹ ಹದಗೆಟ್ಟಿತ್ತು.

'ಓಹ್ ಮೈ ಗಾಡ್! ಈ ಗಾಯಗಳು ಹೇಗಾದವು?'

'ತೀರ್ಥಯಾತ್ರೆ ಮಾಡಿದ್ದೇನೆ'.

'ತೀರ್ಥಯಾತ್ರೆ?'

'ಹೌದು, 108 ಕಿ.ಮೀ. ನಡೆದಿದ್ದೇನೆ. ಹಗಲು, ರಾತ್ರಿ ನಡೆದಿದ್ದೇನೆ... ದೇವಸ್ಥಾನಕ್ಕೆ ಹೋಗಲು...'

'ದೇವಸ್ಥಾನ? ಎಲ್ಲಿಯ ದೇವಸ್ಥಾನ?'

'ಒಂದು ಭಾರತದ ದೇವಸ್ಥಾನ.'

'ನೀವು ತೀರ್ಥಯಾತ್ರೆಗೆ ಭಾರತಕ್ಕೆ ಹೋಗಿದ್ದಿರ?'

'ಭಾರತದ ದೇವಸ್ಥಾನಗಳು ಭಾರತದಲ್ಲಿ ಮಾತ್ರವೇ ಇವೆಯೇ?'

'ಇಲ್ಲ,' ನಾನು ನಾಚಿ ಹೇಳಿದೆ, 'ಭಾರತದ ದೇವಾಲಯಗಳು ವಿದೇಶಗಳಲ್ಲಿಯೂ ಇವೆ. ನೀವು ಎಲ್ಲಿಗೆ ಹೋದಿರಿ?'

'ಇಲ್ಲಿಯ ಡೆನ್ಮಾರ್ಕ್‌ನಲ್ಲಿರುವ ದೇವಸ್ಥಾನಕ್ಕೆ.'

'ಈ ಡೆನ್ಮಾರ್ಕ್‌ನಲ್ಲಿ?'

'ಹೌದು, ಇಲ್ಲಿ ಸೀಲ್ಯಾಂಡ್ ದ್ವೀಪದ ಗಡಿಯಲ್ಲಿ ಒಂದು ಸಿದ್ಧಿವಿನಾಯಕನ ದೇವಸ್ಥಾನವಿದೆ... ಅಲ್ಲಿಗೆ ತೀರ್ಥಯಾತ್ರೆ ಮಾಡಿದ್ದೇನೆ. ಆ ದೇವಸ್ಥಾನಕ್ಕೆ ಡೆನ್ಮಾರ್ಕಿನಲ್ಲಿರುವ ಅನೇಕ ಭಾರತೀಯರು ಹೋಗುತ್ತಾರೆ. ನೀವು ಹೋಗುವುದಿಲ್ಲವೇ?'

'ನಾನು ಕ್ರಿಶ್ಚಿಯನ್ ಆಗಿದ್ದೇನೆ.'

'ಓಹ್! ಸರಿ, ನನ್ನ ಯಾತ್ರೆ ಅಂದರೆ ಈ ಪಾಲ್‌ನ ತೀರ್ಥಯಾತ್ರೆ ಸಫಲವಾಯಿತು! ಇಲ್ಲಿಯ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.'

ಅವನು ಖೀ ಖೀ ಎಂದು ನಕ್ಕ.

'ನನ್ನ ದುರದೃಷ್ಟ, ಆ ಸುದ್ದಿಯನ್ನು ನಾನು ಓದಲಾಗಲಿಲ್ಲ' ಎಂದೆ.

'ನೀವು ಡ್ಯಾನಿಶ್ ಪತ್ರಿಕೆಯನ್ನು ಓದುತ್ತೀರ?'

ನಾನು ಮತ್ತೆ ನಾಚಿ ಮೆಲ್ಲನೆ ಹೇಳಿದೆ, 'ವಿಶೇಷವಾಗಿ ಓದಲ್ಲ. ಆದರೆ ಆ ಉತ್ಸಾಹಿ ತೀರ್ಥಯಾತ್ರಿಕರು ನನ್ನ ಪಾರ್ಲರ್‌ಗೆ ಬಂದಿರುವುದು ನನ್ನ ಅದೃಷ್ಟ. ಇಲ್ಲಿ ನಿಮಗೆ ಸ್ವಾಗತ...'

'ಧನ್ಯವಾದಗಳು' ಅವನು ಮುಗುಳ್ನಕ್ಕ.

'ನೀವು ಈ ಯಾತ್ರೆಯನ್ನು ಆಧ್ಯಾತ್ಮಿಕ ಉದ್ದೇಶದಿಂದ ಮಾಡಿದಿರ?' ಅವನ ಕಾಲುಗಳನ್ನು ಪರೀಕ್ಷಿಸುತ್ತಾ ಕೇಳಿದೆ.

'ನಾನೊಬ್ಬ ಭಕ್ತನಲ್ಲ, ನಾನೊಬ್ಬ ಪ್ರೇಮಿ. ಅದು ಪ್ರೇಮದ ತೀರ್ಥಯಾತ್ರೆಯಾಗಿತ್ತು.'

'ಅರೆ ವಾಹ್!' ನಾನು ಮೆಲ್ಲನೆ ಅಂಗಾಲನ್ನು ಒತ್ತಿದೆ, ರಕ್ತ ಒಸರಿತು. ಅವನು 'ಅಯ್ಯೋ' ಎಂದು ನೋವಿನಿಂದ ನರಳಿದ.

'ನಿಮ್ಮ ಕಾಲುಗಳಲ್ಲಿ ತುಂಬಾ ಗಾಯಗಳಾಗಿವೆ. ರಕ್ತ ಒಸರುತ್ತಿದೆ. ನೀವು ಹೇಗೆ ನಡೆಯುತ್ತಿದ್ದೀರಿ?'

'ಕಾಲುಗಳು ಗಾಯಗೊಂಡವು, ಅದರೆ ಹೃದಯದ ಗಾಯಗಳು ವಾಸಿಯಾದವು' ಅವನು ಮೆಲ್ಲನೆ ನಕ್ಕ.

ನಾನು ಉಗುರು ಬೆಚ್ಚಗಿನ ನೀರಿನ ಟಬ್‌ಗೆ ಉಪ್ಪು ಮತ್ತು ನಿಂಬೆ ರಸವನ್ನು ಹಾಕಿದೆ, ಅವನ